# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1163 |
| 2 | ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 19-12-2024 |
| 4 | ಉತ್ತರಿಸುವವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ನಿತ್ಯ ಉತ್ಪತ್ತಿಯಾಗುತ್ತಿರುವ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯದಿಂದಾಗುತ್ತಿರುವ ಸಮಸ್ಯೆ ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುತ್ತಿರುವ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯದ ಸಂಗ್ರಹಣೆ, ಸಾಗಾಣಿಕೆ ಹಾಗೂ ಸಂಸ್ಕರಣೆಗಾಗಿ ಸಾರ್ವಜನಿಕ ಖಾಸಗೀ ಸಹಭಾಗಿತ್ವ (PPP Model) ಮಾದರಿ ಅಡಿಯಲ್ಲಿ polluter's pay ಆಧಾರದಲ್ಲಿ 2 ವಿಧದಲ್ಲಿ ವಿಂಗಡಿಸಿದ್ದು, 7 ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಇದರಲ್ಲಿ ಮೂರು ಪ್ಯಾಕೇಜಗಳು ಸಂಗ್ರಹಣೆ ಮತ್ತು ಸಾಗಾಣಿಕೆಗೆ ಸಂಬಂಧಿಸಿದ್ದು, ನಾಲ್ಕು ಪ್ಯಾಕೇಜಗಳು ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿವೆ.</td></tr>
<tr><td>ಆ)</td><td>ಬಿಬಿಎಂಪಿ ವ್ಯಾಪ್ತಿಯಲ್ಲಿ ದಿನ ನಿತ್ಯ ಎಷ್ಟು ಮೆಟ್ರಿಕ್ ಟನ್ ಕಟ್ಟಡ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ; ಎಷ್ಟು ಮೆಟ್ರಿಕ್ ಟನ್ ಸಂಸ್ಕರಣಾ ಸಾಮರ್ಥ್ಯದ ಘಟಕಗಳಿವೆ; ಈ ಘಟಕಗಳನ್ನು ಬಿ.ಬಿ.ಎಂ.ಪಿ ನಿರ್ವಹಿಸುತ್ತಿದೆಯೋ ಅಥವಾ ಖಾಸಗಿ ಕಂಪನಿಗಳು ನಿರ್ವಹಿಸುತ್ತಿವೆಯೋ; (ವಿವರವಾದ ಮಾಹಿತಿ ನೀಡುವುದು)</td><td>
<ul>
<li>ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 4500 ಮೆ.ಟನ್ ನಷ್ಟು ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ ಉತ್ಪತ್ತಿಯಾಗುತ್ತಿರುತ್ತದೆ ಎಂಬುದಾಗಿ ಅಂದಾಜಿಸಲಾಗಿರುತ್ತದೆ.</li>
<li>ಪ್ರಸ್ತುತ ಪಾಲಿಕೆಯಲ್ಲಿ ಒಟ್ಟು 1750 ಮೆ.ಟನ್ ಸಂಸ್ಕರಿಸುವ 2 ಘಟಕಗಳು ಪಿ.ಪಿ.ಪಿ. ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿವೆ.</li>
</ul>
<table>
<tr><th>ಸ್ಥಳ</th><th>ಸಾಮರ್ಥ್ಯ</th><th>ಖಾಸಗಿ ಸಂಸ್ಥೆ</th><th>ಷರಾ</th></tr>
<tr><td>ಕಣ್ಣೂರು ಗ್ರಾಮದ ಸರ್ವೇ ನಂ. 50</td><td>ಪ್ರತಿನಿತ್ಯ 750ಮೆ ಟನ್</td><td>M/s. Rubble Revival</td><td>ಪಾಲಿಕೆ ಮಾಲಿಕತ್ವದ 10 ಎಕರೆ ಪ್ರದೇಶದಲ್ಲಿ 20 ವರ್ಷಗಳ ಅವಧಿಗೆ Permissive Use ಆಧಾರದ ಮೇಲೆ ನೀಡಲಾಗಿರುತ್ತದೆ.</td></tr>
<tr><td>ಚಿಕ್ಕಜಾಲ</td><td>ಪ್ರತಿನಿತ್ಯ 1000 ಮೆಟ್ರಿಕ್ ಟನ್</td><td>M/s. Rock Crystals</td><td>ಖಾಸಗಿ ಮಾಲಿಕತ್ವದ ಘಟಕವಾಗಿದ್ದು, ಕಟ್ಟಡ ಭಗ್ನಾವಶೇಷಗಳನ್ನು ಸಂಸ್ಕರಿಸಲು ಪಾಲಿಕೆಯಿಂದ ಅನುಮೋದನೆ ನೀಡಲಾಗಿದೆ.</td></tr>
</table>
</td></tr>
</table>

| | | |
|---|---|---|
| ಇ) | ಈ ಖಾಸಗಿ ಕಂಪನಿಗಳಿಗೆ ಕಟ್ಟಡ ತ್ಯಾಜ್ಯ ಸಂಸ್ಕರಣೆ ಮಾಡಲು ಬಿ.ಬಿ.ಎಂ.ಪಿ ಪಾವತಿ ಮಾಡುತ್ತಿರುವ ಮೊತ್ತವೆಷ್ಟು; ಕಟ್ಟಡ ತ್ಯಾಜ್ಯ ಉತ್ಪಾದಕರಿಂದ ಬಿ.ಬಿ.ಎಂ.ಪಿ ಪಡೆಯುತ್ತಿರುವ ಶುಲ್ಕವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | • M/s. Rubble Revival ಮತ್ತು M/s. Rock Crystals ಕಂಪನಿಗಳಿಗೆ ಕಟ್ಟಡ ತ್ಯಾಜ್ಯ ಸಂಸ್ಕರಣೆ ಮಾಡಲು ಬಿಬಿಎಂಪಿ ವತಿಯಿಂದ ಯಾವುದೇ ಪಾವತಿ ಮಾಡುತ್ತಿರುವುದಿಲ್ಲ.<br>• ಸದರಿ ಕಂಪನಿಯವರಿಗೆ ಖಾಸಗಿಯವರಿಂದ ಕಟ್ಟಡಗಳ ಹಾಗೂ ನಿರ್ಮಾಣ ಸಾಮಗ್ರಿಗಳ ಭಗ್ನಾವಶೇಷ ತ್ಯಾಜ್ಯಗಳನ್ನು ಸಂಸ್ಕರಿಸಲು ಪ್ರತಿ ಟನ್‌ಗೆ ರೂ. 134/- ದರಗಳಂತೆ ಪಡೆದುಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ.<br>• ಕಟ್ಟಡ ತ್ಯಾಜ್ಯ ಉತ್ಪಾದಕರಿಂದ ಬಿಬಿಎಂಪಿಯು ಯಾವುದೇ ತ್ಯಾಜ್ಯ ನಿರ್ವಹಣೆಗೆ ಶುಲ್ಕ ಪಡೆಯುತ್ತಿರುವುದಿಲ್ಲ. |
| ಈ) | ಬಿ.ಬಿ.ಎಂ.ಪಿಯು ಬೆಂಗಳೂರು ನಗರದ ಹೊರ ವಲಯದಲ್ಲಿ ಹೊಸದಾಗಿ ಎಷ್ಟು ಸಾಮರ್ಥ್ಯದ ಮೆಟ್ರಿಕ್ ಟನ್ ಸಂಸ್ಕರಣಾ ಘಟಕಗಳನ್ನು ನಿರ್ಮಿಸಲು ಮುಂದಾಗಿದೆ? (ವಿವರ ನೀಡುವುದು) | ಬಿಬಿಎಂಪಿಯು ಬೆಂಗಳೂರು ನಗರದ ಹೊರ ವಲಯದಲ್ಲಿ ಹೊಸದಾಗಿ 750 ಮೆ.ಟನ್ ಸಾಮರ್ಥ್ಯದ 4 ಸಂಸ್ಕರಣಾ ಘಟಕಗಳನ್ನು ನಿರ್ಮಿಸಿ ಕಟ್ಟಡಗಳ ಹಾಗೂ ನಿರ್ಮಾಣ ಸಾಮಗ್ರಿಗಳ ಭಗ್ನಾವಶೇಷ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಟೆಂಡರ್ ಪ್ರಕ್ರಿಯೆ ನಿರ್ವಹಿಸಲಾಗಿರುತ್ತದೆ. |

**ಸಂಖ್ಯೆ: ನಅಇ 628 ಎಂಎನ್‌ವೈ 2024 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ